ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬಂಟ್ವಾಳ

ಸಿ.ಸಿ. ನಂಬ್ರ: **808/2019** ಸಿ.ಡಬ್ಲ್ಯೂ: **1** ಪಿ.ಡಬ್ಲ್ಯೂ: **2**

ಸಾಕ್ಷಿದಾರರ ಹೇಳಿಕೆ:

ಸಾಕ್ಷಿಯ ಹೆಸರು : ಮೆಗ್ದಲೀನ್ ಅಲ್ಬುಕರ್ಕ್

ಗಂಡನ ಹೆಸರು : ಜಾನ್ ಅಲ್ಬುಕರ್ಕ್

ವಯಸ್ಸು : 54 ವರ್ಷ

ಉದ್ಯೋಗ : ಅಂಗನವಾಡಿ ಕಾರ್ಯಕರ್ತೆ

ವಾಸ ಸ್ಥಳ : ಚೇಳೂರು ಗ್ರಾಮ, ಬಂಟ್ವಾಳ ತಾಲೂಕು

ದಿ: **25.03.2026** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು:

ದಂಡ ಪ್ರಕ್ರಿಯಾ ಸಂಹಿತೆ ಕಲಂ **299** ರಡಿಯಲ್ಲಿ ಸಾಕ್ಷಿಯ ವಿಚಾರಣೆ

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು 2002 ರಿಂದ 2025 ರವರೆಗೆ ಚೇಳೂರು ಸೈಟ್ ಅಂಗನವಾಡಿಯಲ್ಲಿ ಕಾರ್ಯಕರ್ತೆಯಾಗಿ ಕೆಲಸ ಮಾಡಿರುತ್ತೇನೆ.

2. ನಾನು ಸದರಿ ಅಂಗನವಾಡಿಯಲ್ಲಿ ಕೆಲಸ ಮಾಡುತ್ತಿದ್ದಾಗ ಜ್ಯೋತಿ ಸ್ತ್ರೀ ಶಕ್ತಿ ಸಂಘ ಸಹ ಕಾರ್ಯ ನಿರ್ವಹಿಸುತ್ತಿತ್ತು. ಸದರಿ ಸ್ತ್ರೀ ಶಕ್ತಿ ಸಂಘದ ಉಸ್ತುವಾರಿಯನ್ನು ನಾನು ನೋಡಿಕೊಳ್ಳುತ್ತಿದ್ದೆ. ಆರೋಪಿಯ ಹೆಂಡತಿಯಾದ ರಮ್ಯಶ್ರೀ ರವರು ಸದರಿ ಸಂಘದ ಸದಸ್ಯರಾಗಿದ್ದು, ಅವರು ರೂ. 20 ಸಾವಿರ ಸಾಲವನ್ನು 10 ತಿಂಗಳ ವಾಯಿದೆಗೆ ಸಂಘದಿಂದ ಪಡೆದಿದ್ದು, ಅವರಿಂದ ಸಂಘಕ್ಕೆ ರೂ. 13,450 ಹಣ ಬಾಕಿ ಇತ್ತು. ನಂತರ ದಿನಾಂಕ 18.03.2019 ರಂದು ಮದ್ಯಾಹ್ನ 3 ಗಂಟೆಯ ಸಮಯದಲ್ಲಿ ಆರೋಪಿ ಅವರ ಮಕ್ಕಳನ್ನು ಕರೆದುಕೊಂಡು ಹೋಗಲು ಅಂಗನವಾಡಿಗೆ ಬಂದಿದ್ದು, ಆ ಸಂದರ್ಬದಲ್ಲಿ ನಾನು ಅವರಿಗೆ ಸಂಘಕ್ಕೆ ಬರಬೇಕಾದ ಸಾಲದ ಬಾಕಿ ಹಣದ ಬಗ್ಗೆ ತಿಳಿಸಲಾಗಿ ಆರೋಪಿ ನನ್ನ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಅಲ್ಲದೇ ಕೈಯಿಂದ ನನಗೆ ಹಲ್ಲೆ ಮಾಡಿ ನನ್ನ ಸೀರಿಯನ್ನು ಎಳೆದು ನನ್ನನ್ನು ದೂಡಿ ಹಾಕಿರುತ್ತಾನೆ. ಇದರಿಂದ ನನ್ನ ಬಲ ಕೈಗೆ ತರಚಿದ ಗಾಯ ಹಾಗೂ ಸೊಂಟಕ್ಕೆ ನೋವು ಉಂಟಾಗಿರುತ್ತದೆ. ನಂತರ ಸದರಿ ಅಂಗನವಾಡಿಯಲ್ಲಿ ಅಡುಗೆ ಕೆಲಸ ಮಾಡುವ

ಕೆಲಸಗಾರರು ಬರುವಾಗ ಅವರನ್ನು ನೋಡಿ ಆರೋಪಿ ಮಕ್ಕಳನ್ನು ಕರೆದುಕೊಂಡು ಸ್ಥಳದಿಂದ ಓಡಿ ಹೋಗಿರುತ್ತಾನೆ. ಆರೋಪಿಯ ಸದರಿ ಕೃತ್ಯದಿಂದಾಗಿ ನನ್ನ ಕರ್ತವ್ಯಕ್ಕೆ ಅಡ್ಡಿ ಉಂಟಾಗಿರುತ್ತದೆ. ನಂತರ ನಾನು ನನ್ನ ಮಗನಾದ ಚಾಸಾ6 ರವರಿಗೆ ಕರೆ ಮಾಡಿ ವಿಚಾರ ತಿಳಿಸಿದ್ದು, ಆತ ಬಂದು ನನ್ನನ್ನು ಬಂಟ್ವಾಳ ಸರ್ಕಾರಿ ಆಸ್ಪತ್ರೆಗ ಕರೆದುಕೊಂಡು ಹೋಗಿರುತ್ತಾನೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೊಲೀಸರು ಅಲ್ಲಿಗೆ ಬಂದು ನನ್ನ ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿಯು ತಾನು ನೀಡಿದ ಹೇಳಿಕೆಯನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿ.ಪಿ. 7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 7(ಎ) ಎಂದು ಗುರುತಿಸಲಾಯಿತು.

3. ನಂತರ ದಿನಾಂಕ 19.03.2019 ರಂದು ತಕ್ಷೀರು ಸ್ಥಳಕ್ಕೆ ಪೊಲೀಸರು ಬಂದಿದ್ದು, ನಾನು ಹಾಜರಿದ್ದು ತೋರಿಸಿಕೊಟ್ಟಂತೆ ತಕ್ಷೀರು ಸ್ಥಳದ ಮಹಜರು ಕ್ರಮವನ್ನು ಪಂಚರಾದ ಚಾಸಾ 7 ಮತ್ತು 8 ರವರ ಸಮಕ್ಷಮ ಬೆಳಿಗ್ಗೆ 11.30 ರಿಂದ 12.15 ರವರೆಗೆ ಜರುಗಿಸಿರುತ್ತಾರೆ. ಸಾಕ್ಷಿಯು ತಕ್ಷೀರು ಸ್ಥಳದ ಮಹಜರನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿ.ಪಿ. 8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 8(ಎ) ಎಂದು ಗುರುತಿಸಲಾಯಿತು. ನಂತರ ದಿನಾಂಕ 26.03.2019 ರಂದು ನ್ಯಾಯಾದಿಶರ ಮುಂದೆ ಹಾಜರಾಗಿ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಭಾರತೀಯು ದಂಡ ಸಂಹಿತೆ ಕಲಂ 164 ರಡಿಯಲ್ಲಿ ನೀಡಿದ ಹೇಳಿಕೆಯನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿ.ಪಿ. 9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 9 (ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

(ಆರೋಪಿಯು ತಲೆಮರೆಸಿಕೊಂಡಿರುವುದರಿಂದ ಪಾಟೀ ಸವಾಲು ಇರುವುದಿಲ್ಲ )

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ, ಬಂಟ್ವಾಳ